(iii) ಹಿಂದೆ ಬೀದರ್ ಗುಲ್ಬರ್ಗದ ಖಾಸಗೀ ಸರ್ವೀಸ್‌ನಲ್ಲಿ ಕೆಲಸ ಮಾಡುತ್ತಿದ್ದ ನೌಕರರನ್ನು ಸಾರಿಗೆ ಇಲಾಖೆಯಲ್ಲಿ ಸೇರಿಸಿಕೊಳ್ಳುವ ಬಗ್ಗೆ

ಶ್ರೀ ಕಲ್ಯಾಣರಾವ್ ಮೊಳಕೇರಿ (ಭಾಲ್ಕಿ).—ನವೆಂಬರ್ ೧೯೮೫ರೊಳಗೆ ಬೀದರ್ ಗುಲ್ಬರ್ಗ ರಸ್ತೆ ರಾಷ್ಟ್ರೀಕರಣ ಮಾಡಿ ಖಾಸಗಿ ಸರ್ವೀಸ್‌ಗಳನ್ನು ನಿಲ್ಲಿಸಲಾಯಿತು. ಈ ಕ್ರಮದಿಂದ ಬೀದರ್ ಗುಲ್ಬರ್ಗ ದಲ್ಲಿ ಮಾಲೀಕರ ಸರ್ವೀಸ್ ಮೇಲೆ ಕೆಲಸ ಮಾಡ ಜೀವನ ನಡೆಸುತ್ತಿದ್ದು, ನಿರ್ಗತಿಕ ಬಡಪಾಯಿ ಹಿಂದುಳಿದಜಿಲ್ಲೆಯ ಕಾರ್ಮಿಕರು ಧರಣಿ ಸತ್ಯಾಗ್ರಹ ಜೈಲುವಾಸ ಇತ್ಯಾದಿ ಮಾಡಿದ ನಂತರ ಸರ್ಕಾರದ ಪರವಾಗಿ ಸಾರಿಗೆ ಸಚಿವರು ಭರವಸೆ ಕೊಟ್ಟಿದ್ದ ನಂತರ, ಚಳುವಳಿ ನಿಲ್ಲಿಸಿ ಆದೇಶಕ್ಕಾಗಿ ಕಾಯುತ್ತಾ ೯ ತಿಂಗಳು ಕಳೆದರೂ ಇನ್ನೂ ಬಗೆಹರಿಯದಿದ್ದಕ್ಕಾಗಿ ಚಿಂತಾಜನಕರಾಗಿದ್ದಾರೆ.

ಆದ್ದರಿಂದ ದಯಮಾಡಿ ಈ ಶಾಸನ ಸಭೆಯು ಮುಂಗಿಯುವುದರೊಳಗಾಗಿ ಅಂತಿಮವಾಗಿ ಚರ್ಚೆ ಮಾಡಿ ಈಗಾಗಲೇ ಒಪ್ಪಿದಂತೆ ಆ ನಿರ್ಗತಿಕ ನ್ಯಾಯವಾದ ಎಲ್ಲಾ ಕಾರ್ಮಿಕರನ್ನು ಸಾರಿಗೆ ಇಲಾಖೆಯಲ್ಲಿ ಸೇರಿಸಿಕೊಂಡು ನ್ಯಾಯ ದೊರಕಿಸಿ ಕೊಡುವಂತೆ ಮಾನ್ಯ ಮುಖ್ಯ ಮಂತ್ರಿಗಳು ಹಾಗೂ ರಾಜ್ಯ ಸಾರಿಗೆ ಸಚಿವರ ಗಮನ ಸೆಳೆಯುತ್ತೇನೆ.

ಶ್ರೀ ಪಿ. ವೀರಣ್ಣ (ಸಾರಿಗೆ ಸಚಿವರು).—

ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ಸಂಸ್ಥೆಯು ದಿನಾಂಕ ೧೬-೧೧-೧೯೮೫ ಗುಲ್ಬರ್ಗ, ಬೀದರ್ ಜಿಲ್ಲೆಗಳ ಮಾರ್ಗಗಳನ್ನು ರಾಷ್ಟ್ರೀಕರಣ ಮಾಡಲು ಒಂದು ಯೋಜನೆಯನ್ನು ಪ್ರಕಟಿಸಿತು.

ರಾಜ್ಯ ಸರ್ಕಾರವು ಸಂಬಂಧಪಟ್ಟವರೆಲ್ಲರಿಗೂ ಸಾಕಷ್ಟು ಅವಕಾಶವನ್ನು ಕೊಟ್ಟು ದಿನಾಂಕ ೬-೧೧-೧೯೮೬ ರಲ್ಲಿ ಈ ಯೋಜನೆಯನ್ನು ಪ್ರಕಟಿಸಿತು. ದಿನಾಂಕ ೭-೧೧-೧೯೮೫ ರಂದು ಈ ಪ್ರಕಟನೆಯು ಅಧಿಕೃತವಾಗಿ ರಾಜ್ಯ ಪತ್ರದಲ್ಲಿ ಪ್ರಕಟವಾಯಿತು

ಈ ಪ್ರಕಟಣೆಯ ಪ್ರಕಾರ ದಿನಾಂಕ ೮-೧೧-೧೯೮೫ ರಿಂದ ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ಸಂಸ್ಥೆಯು, ಕಾರ್ಯಾಚರಣೆಯನ್ನು ಪ್ರಾರಂಭಿಸಿ ಗುಲ್ಬರ್ಗ ಬೀದರ್ ಜಿಲ್ಲೆಗಳ ಎಲ್ಲಾ ಮಾರ್ಗಗಳಲ್ಲೂ ತನ್ನ ಬಸ್ಸುಗಳನ್ನು ಓಡಿಸುತ್ತಿದೆ.

ಈ ರಾಷ್ಟ್ರೀಕರಣ ಯೋಜನೆಯನ್ನು ಕಾರ್ಯಗತ ಮಾಡಲು ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ಸಂಸ್ಥೆ ಗುಲ್ಬರ್ಗ ವಿಭಾಗವು ೨೯೬ ಚಾಲಕರು, ೩೦೮ ನಿರ್ವಾಹಕರು ಮತ್ತು ೧೨೫ ಹೆಲ್ಪರ್‌ಗಳನ್ನು ದಿನಾಂಕ ೨೬-೧೦-೧೯೮೫, ದಿನಾಂಕ ೩೧-೧೦-೧೯೮೫, ದಿನಾಂಕ ೨೮-೧೦-೧೯೮೫ ರಂದು ಕ್ರಮವಾಗಿ ಆಯ್ಕೆಮಾಡಿತು.

ಇದರ ಜೊತೆಗೆ ೨೮೩ ಚಾಲಕರ ಆಯ್ಕೆಯು ಈಗಾಗಲೇ ಮುಗಿದಿದೆ. ಅಲ್ಲದೆ ೨೬೯ ನಿರ್ವಾಹಕರ ಹುದ್ದೆಗಳ ಆಯ್ಕೆಯು ಅಂತಿಮ ಘಟ್ಟದಲ್ಲಿದೆ,

ಖಾಸಗೀ ವಾಹನಗಳಲ್ಲಿ ಕೆಲಸ ಮಾಡುತ್ತಿದ್ದು ಮೇಲ್ಕಂಡ ಆಯ್ಕೆಗಳಿಗೆ ಅರ್ಜಿ ಸಲ್ಲಿಸಿದ ಎಲ್ಲಾ ಅರ್ಹ ಅಭ್ಯರ್ತಿಗಳನ್ನು ಆಯ್ಕೆ ಮಾಡಲಾಗಿದೆ.

ಆದರೆ ಮೇಲ್ಕಂಡ ಪ್ರಕಟಣೆಗಳಿಗನುಸಾರವಾಗಿ ಅರ್ಜಿ ಸಲ್ಲಿಸಲು ತಮಗೆ ನಿಗದಿತ ಅರ್ಹತೆಗಳು ಇಲ್ಲದ್ದರಿಂದ ಸಾಧ್ಯವಾಗದ ಆದರೂ ತಮ್ಮನ್ನು ಕೆಲಸಕ್ಕೆ ನೇಮಿಸಿಕೊಳ್ಳುವಂತೆ ಕೆಲವು ಖಾಸಗೀ ಬಸ್ಸಿನ ನೌಕರರು ಮನವಿ ಮಾಡಿಕೊಂಡಿದ್ದಾರೆ.

ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ಸಂಸ್ಥೆಯಲ್ಲಿ ಯಾವುದೇ ಹುದ್ದೆಗೆ ಸೇರಬಯಸುವವರು, ಒಂದು ನಿರ್ದಿಷ್ಟ ವಿದ್ಯಾ ಅರ್ಹತೆಯನ್ನು ಹೊಂದಿರುವುದು ಅವಶ್ಯಕ. ಈ ಬಗ್ಗೆ ವಿಶೇಷ ರಿಯಾಯಿತಿ ನೀಡುವ ಬಗ್ಗೆ ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ಸಂಸ್ಥೆಯು ರಾಜ್ಯ ಸರ್ಕಾರದೊಡನೆ ಒಂದು ಸಂಯುಕ್ತ ನೀತಿಯನ್ನು ನಿರೂಪಿಸಲು ಪ್ರಯತ್ನಿಸುತ್ತಿದೆ. ಆದ್ದರಿಂದ ಆ ಬಗ್ಗೆ ಒಂದು ನಿರ್ದಿಷ್ಟ ನೀತಿಯು ಅವಶ್ಯಕವಾಗದೆ ಯಾವುದೇ ಸೂತ್ರವಿಲ್ಲದೆ ಇಂತಹ ಖಾಸಗೀ ನೌಕರರನ್ನು ಕೆಲಸಕ್ಕೆ ಸೇರಿಸಿಕೊಳ್ಳುವ ವಿಚಾರ ಬಹಳ ಕ್ಲಿಷ್ಟವಾಗಿದೆ. ಕೇಡರ್ ಅಂಡ್ ರೆಕ್ರೂಟ್‌ಮೆಂಟ್ ರೆಗ್ಯೂಲೇಶನ್ (ಸೇವಾ ಸಿಬ್ಬಂದಿ ನಿಯಮ)ವನ್ನು ತಿದ್ದುಪಡಿ ಮಾಡಬೇಕಾಗುತ್ತದೆ. ಆದ್ದರಿಂದ ಯಾವಾಗ ಸದರೀ ಖಾಸಗೀ ಬಸ್ಸಿನ

ನೌಕರರನ್ನು ಕೆಲಸಕ್ಕೆ ತೆಗೆದುಕೊಳ್ಳಲಾಗುತ್ತದೆಂದು ಹೇಳುವುದು ಸಾಧ್ಯವಿಲ್ಲ. ಆದಾಗ್ಯೂ ಆದಷ್ಟು ಬೇಗ ಈ ಬಗ್ಗೆ ಒಂದು ಸ್ಪಷ್ಟ ನೀತಿಯನ್ನು ನಿರೂಪಿಸಿ ಸಮಸ್ಯೆಯನ್ನು ಬಗಹರಿಸಲು ಪ್ರಯತ್ನಿಸಲಾಗುವುದು.

(iv) ಅರಣ್ಯ ಇಲಾಖೆಯವರು ನೆಡುತೋಪು ನಿರ್ಮಾಣ, ರಸ್ತೆ ಬದಿ ಸಾಮಾಜಿಕ ಅರಣ್ಯ ಇತ್ಯಾದಿ ಕೆಲಸಗಳಲ್ಲಿ ಅವ್ಯವಹಾರ ನಡೆಸುತ್ತಿರುವ ಬಗ್ಗೆ

ಶ್ರೀ ಕೆ. ಪ್ರತಾಪಚಂದ್ರ ಶೆಟ್ಟಿ.—ಅರಣ್ಯ ಇಲಾಖೆಯವರು ನೆಡುತೋಪು ನಿರ್ಮಾಣ, ರಸ್ತೆ ಬದಿ ಸಾಮಾಜಿಕ ಅರಣ್ಯ ಇತ್ಯಾದಿ ರಚಿಸುವಾಗ ಇಲಾಖೆಯ ಮೂಲಕವೇ ಹೊಂಡಗಳನ್ನು ಮಾಡಿ, ಗಿಡಗಳನ್ನು ನೆಟ್ಟು, ಬೇಲಿ ಹಾಕಿಸುವುದು, ಗೊಬ್ಬರ ಹಾಕಿ ಬೆಳಸುವುದು, ಇತ್ಯಾದಿ ಮಾಡಲಾಗುತ್ತದೆ. ಇದರಿಂದ ನಿಜವಾಗಿ ತಗಲುವ ವೆಚ್ಚಕ್ಕಿಂತ ಹೆಚ್ಚಿಗೆ ಹಣ ವ್ಯಯವಾಗುತ್ತಿದೆ. ಮತ್ತು ಎಲ್ಲೆಲ್ಲಿಯೂ ಅವ್ಯವಹಾರ ಜರುಗುತ್ತಿದೆ ಎಂಬ ದೂರು ಬಹಳ ಕಡೆ ಇದೆ. ಇದು ಸರಕಾರದ ಗಮನಕ್ಕೆ ಬಂದಿದೆಯೇ ? ಇದನ್ನು ನಿವಾರಿಸಲು ಬೇರೆ ಬೇರೆ ಕೆಲಸಕ್ಕೆ ಬಹಿರಂಗ ಟೆಂಡರ್ ಕರೆದು ಸ್ಪರ್ಧಾತ್ಮಕ ಬೆಲೆಯಲ್ಲಿ ಕೆಲಸ ನೀಡಿದಲ್ಲಿ ಸರ್ಕಾರಕ್ಕೂ ಉಳಿತಾಯವಾಗುವುದಿಲ್ಲವೆ ಅಧಿಕಾರಿಗಳಿಗೆ ಅರಣ್ಯ ರಕ್ಷಣೆಯ ಮಹತ್ವದ ಕೆಲಸಕ್ಕೆ ಹೆಚ್ಚು ಗಮನ ನೀಡಲು ಅವಕಾಶ ಕಲ್ಪಿಸಿದಂತಾಗುವುದಿಲ್ಲವೇ ಎಂಬುದನ್ನು ಸರ್ಕಾರದಿಂದ ತಿಳಿಯಬಯಸುತ್ತೇನೆ.

ಶ್ರೀ ಜೆ. ಎಸ್. ದೇಶಮುಖ್ (ಅರಣ್ಯ ಮಂತ್ರಿಗಳು).—

೧. ಅರಣ್ಯ ಇಲಾಖೆಯ ವತಿಯಿಂದ ನೆಡುತೋಪು ನಿರ್ಮಾಣ ಮತ್ತು ಸಾಲು ಮರಗಳನ್ನು ಬೆಳೆಸಲು, ಗಿಡಗಳಿಗೆ ಬೇಲಿ, ಗೊಬ್ಬರ ಮತ್ತು ನೀರು ಹಾಕಲು ಸಾಮಾನ್ಯವಾಗಿ ಇಲಾಖೆಯ ಮುಖಾಂತರವೇ ದಿನಗೂಲಿ ದರದಲ್ಲಿ ಕೆಲಸವನ್ನು ಕೈಗೊಳ್ಳಲಾಗುತ್ತಿದೆ.

೨. ಇನ್ನಿತರ ಕಾರ್ಯಗಳಾದ, ಸಸ್ಯ ಕ್ಷೇತ್ರಗಳಲ್ಲಿ ಸಸಿಗಳನ್ನು ಬೆಳೆಸುವುದಂ ನೀರು ಹಾಕುವುದು, ಬೇಲಿ ಹಾಕಿಸುವುದು ಇತ್ಯಾದಿ ಕೆಲಸಗಳನ್ನು ನಿಗದಿತ ವೇಳೆಯಲ್ಲಿ ಕಾಲಕ್ಕನುಗುಣವಾಗಿ ನಡೆಯಬೇಕಾಗಿರುವುದರಿಂದ ಇಂತಹ ಕೆಲಸಗಳಿಗೆ ಟೆಂಡರ್ ಕರೆಯಲು ಆಗುವುದಿಲ್ಲ.

೩. ಮೇಲೆ ಸೂಚಿಸಿದ ಕೆಲಸಗಳನ್ನು ಟೆಂಡರ್ ಮೂಲಕ ಮಾಡಿಸುವುದರಿಂದ ಸಮಯಕ್ಕೆ ಅನುಸಾರವಾಗಿ ಕಾಲಕಾಲಕ್ಕೆ ನಡೆಸಲು ಸಾಧ್ಯತೆ ಆಗದಿದ್ದ ಪಕ್ಷದಲ್ಲಿ, ಅಲ್ಲದೆ ಗುತ್ತಿಗೆದಾರರೊಡನೆ ಯಾವುದೇ ವಿವಾದಗಳು ಬಂದಲ್ಲಿ ಪರಿಹರಿಸುವ ತನಕ ಸಮಯವು ಕಳೆದು ಹೋಗಿ ಕೆಲಸವನ್ನು ನಿರ್ವಹಿಸಲು ಸಾಧ್ಯವಾಗುವುದಿಲ್ಲ. ಮತ್ತು ಇದರಿಂದ ಬಹಳಷ್ಟು ನಷ್ಟವನ್ನು ಅನುಭವಿಸುವ ಸಂಭವ ಇರುತ್ತದೆ.

೪. ಇಲಾಖೆಯಿಂದ ಯಾವುದೇ ನೆಡು ತೋಪುಗಳನ್ನು ಬೆಳೆಸುವ ಕೆಲಸವೇ ಆಗಲೀ ಅಥವಾ ಇತರ ಯಾವುದೇ ಕೆಲಸಗಳನ್ನು ಮಾಡುವಲ್ಲಿ ಅಂದಾಜು ಪಟ್ಟಿಯನ್ನು ಮಾಡಿ ಅದರಲ್ಲಿ ಕೆಲಸಗಳ ವಿವರ ಮತ್ತು ದರಗಳನ್ನು ಮೊದಲು ನಮೂದಿಸಿ ಅದಕ್ಕೆ ಮಂಜೂರಾತಿಯನ್ನು ಪಡೆದ ನಂತರವೇ ಈ ಕೆಲಸಗಳನ್ನೆಲ್ಲಾ ಕಾರ್ಯಗತಗೊಳಿಸಬೇಕಾಗುತ್ತದೆ. ಮತ್ತು ಪ್ರತಿ ಹಂತದಲ್ಲಿಯೂ ದರ, ಮತ್ತು ಹಣದ ಬಗ್ಗೆ ಸಾಕಷ್ಟು ಎಚ್ಚರಿಕೆ ವಹಿಸಲಾತುತ್ತಿದೆ. ಆದುದರಿಂದ ಇದರಲ್ಲಿ ಸರ್ಕಾರಕ್ಕೆ ನಷ್ಟ ಆಗುವ ಸಂಭವ ಇರುವುದಿಲ್ಲ.

೪–೦೦ ಪಿ. ಎಂ.

೫. ಹಂಬ್ಬಳ್ಳಿ—ಮಹಾಲಿಂಗಪುರ ಹಿಪಿ. ಕೆ. ವಿ. ಲೈನು ಮತ್ತು ಜಮಖಂಡಿ ಮಹಾಲಿಂಗಪುರ ೧೧೦ ಕೆ. ವಿ. ಲೈನಿನ ಯೋಜನೆಯನ್ನು ಬೇಗನೆ ಪೂರೈಸುವ ಬಗ್ಗೆ

ಶ್ರೀ ಜೆ ಎಸ್. ಬಾಗಲಕೋಟೆ (ಜಮಖಂಡಿ).—ಮಾನ್ಯ ಅಧ್ಯಕ್ಷರೇ, ಬಿಜಾಪುರ ಜಿಲ್ಲೆಯ ಜಮಖಂಡಿ ತಾಲ್ಲೂಕಿನ ಜಮಖಂಡಿ, ರಬಕವಿ, ಬನಹಟ್ಟಿ, ತೇರದಾಳ ಮತ್ತಿತರ ನಗರಗಳು ಮತ್ತು ಮುಧೋಳ ತಾಲ್ಲೂಕಿನ ಮಹಾಲಿಂಗಪುರ ಔದ್ಯಮಿಕ ನಗರಗಳಾಗಿವೆ.